ಓ ಎಸ್ ನಂ. 168/2018

ಪಿ ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 31.05.2023

**ಪಾಟೀ ಸವಾಲುಃ- ಶ್ರೀ ಡಿ ಆರ್ ಎನ್ 1, 3 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರಿಂದ .**

ನಾನು ಅರೆವೈದ್ಯಕೀಯ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನನ್ನ ತಾತ ಬೊಮ್ಮೆಗೌಡ ಮತ್ತು ಅಜ್ಜಿ ಬೋರಮ್ಮ ಅವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರೆಂದರೆ ಕೃಷ್ಣೇಗೌಡ, ಕೇಶವಮೂರ್ತಿ, ನಂಜಮ್ಮ ಮತ್ತು ದೇವರಾಜು. ನನ್ನ ತಾತ ಬೊಮ್ಮೇಗೌಡರವರು ಯಾವ ವರ್ಷದಲ್ಲಿ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಜನನ ದಿನಾಂಕ 10.08.1997 ಇರುತ್ತದೆ. ನನ್ನ ತಂದೆ ತೀರಿಕೊಂಡ ನಂತರ ನನ್ನ ದೊಡ್ಡಪ್ಪಂದಿರು ಮತ್ತು ನಾವು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದೇವೆ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪಂದಿರು ಸುಮಾರು 29 ವರ್ಷಗಳಿಂದ ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯೇ ನಮ್ಮ ವಿದ್ಯಾಭ್ಯಾಸವನ್ನು ಹಾಗೂ ನಮ್ಮ ಯೋಗ ಕ್ಷೇಮವನ್ನು ನೋಡಿಕೊಂಡಿದ್ದರು ಎಂದರೆ ಸರಿ. ಕೃಷ್ಣೇಗೌಡರವರ ಕುಟುಂಬದ ಯೋಗಕ್ಷೇಮವನ್ನು ಕೃಷ್ಣೇಗೌಡರವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದಲ್ಲಿ ವಾಸವಿದ್ದಾಗ ಎಲ್ಲರೂ ಸೇರಿ ಯೋಗಕ್ಷೇಮ ಮತ್ತು ಖರ್ಚು ವೆಚ್ಚವನ್ನು ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಸುಮಾರು 9 ವರ್ಷಗಳಿಂದ ನಮ್ಮ ದೊಡ್ಡಪ್ಪಂದಿರು ಮತ್ತು ನಾವು ಪ್ರತ್ಯೇಕವಾಗಿ ವಾಸವಿದ್ದು ಅಂದಿನಿಂದ ಅವರು ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿಲ್ಲ. ನಾವು ಸುಮಾರು 15 ವರ್ಷಗಳಿಂದ ಬಿ ಪಿ ಎಲ್ ಕಾರ್ಡ್ ನ್ನು ಹೊಂದಿದ್ದೇವೆ. ಸದರಿ ಬಿ ಪಿ ಎಲ್ ಕಾರ್ಡ್ ನಲ್ಲಿ ನನ್ನ ತಂದೆ, ನನ್ನ ತಾಯಿ ಹಾಗೂ ನನ್ನ ಹೆಸರು ಇತ್ತು. ಸದರಿ ಕಾರ್ಡ್ ನಲ್ಲಿ ಕುಟುಂಬದ ಯಜಮಾನ ದೇವರಾಜು ಎಂದು ನಮೂದಿಸಲಾಗಿತ್ತು ಎಂದರೆ ಸರಿ. ಸದರಿ ಕಾರ್ಡ್ ನ್ನು ಪಡೆದುಕೊಳ್ಳಬೇಕಾದರೆ ನಾವು ಪ್ರತ್ಯೇಕವಾಗಿ ವಾಸವಾಗಿದ್ದೇವೆ ಆದುದರಿಂದ ಪ್ರತ್ಯೇಕ ರೇಷನ್ ಕಾರ್ಡ್ ನ್ನು ನೀಡಬೇಕು ಎಂದು ಅರ್ಜಿಯನ್ನು ಸಲ್ಲಿಸಲಾಗುತ್ತದೆ ಎಂದರೆ ಸರಿ. ನಾವು ಪ್ರತ್ಯೇಕವಾಗಿ ವಾಸವಾಗಿದ್ದರಿಂದ ನನ್ನ ತಂದೆ ಪ್ರಮಾಣ ಪತ್ರವನ್ನು ನೀಡಿ ಪ್ರತ್ಯೇಕ ರೇಷನ್ ಕಾರ್ಡ್ ನ್ನು ಮಾಡಿಸಿರುತ್ತಾರೆ ಎಂದರೆ ಸರಿ. ನನ್ನ ದೊಡ್ಡಪ್ಪಂದಿರು ಪ್ರತ್ಯೇಕವಾಗಿ ವಾಸವಿದ್ದು ಪ್ರತ್ಯೇಕವಾಗಿ ರೇಷನ್ ಕಾರ್ಡ್ ನ್ನು ಹೊಂದಿದ್ದಾರೆ ಎಂದರೆ ಸಾಕ್ಷಿಯು ಪ್ರತ್ಯೇಕವಾಗಿ ವಾಸವಾಗಿಲ್ಲ, ಪ್ರತ್ಯೇಕ ರೇಷನ್ ಕಾರ್ಡ್ ನ್ನು ಮಾತ್ರ ಹೊಂದಿದ್ದಾರೆ ಪ್ರತ್ಯೇಕವಾಗಿ ರೇಷನ್ ಕಾರ್ಡ್ ನ್ನು ನೀಡಬೇಕು ಎಂದು ಅರ್ಜಿ ಸಲ್ಲಿಸಿದಾಗ ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದು ದೃಢೀಕರಣ ಮಾಡಿದ ನಂತರ ಪ್ರತ್ಯೇಕ ರೇಷನ್ ಕಾರ್ಡ್ ನ್ನು ನೀಡುತ್ತಾರೆ ಎಂದರೆ ಸರಿ. ಗ್ರಾಮ ಲೆಕ್ಕಾಧಿ ಕಾರಿಗಳು ಸ್ಥಳ ಪರಿಶೀಲನೆ ಮಾಡಿ ಪ್ರತ್ಯೇಕವಾಗಿ

ವಾಸವಾಗಿದ್ದಾರೆ ಎಂದು ದೃಢೀಕರಣವಾದ ನಂತರ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪಂದಿರಿಗೆ ರೇಷನ್ ಕಾರ್ಡ್ ನ್ನು ನೀಡಿರುತ್ತಾರೆ ಎಂದರೆ ಸರಿ.

2 ನೇ ಪ್ರತಿವಾದಿ ನಂಜಮ್ಮ ಅವರು ನನ್ನ ತಾಯಿಯ ತಾಯಿ. ನಂಜಮ್ಮನವರ ವಿವಾಹವನ್ನು ನನ್ನ ತಾತ ಬೊಮ್ಮೆಗೌಡರವರು ಬದುಕಿದ್ದಾಗಲೇ ನೆರವೇರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದಾಗಿನಿಂದಲೂ ನಂಜಮ್ಮ ಅವರು ಅವರ ಗಂಡನ ಮನೆಯಲ್ಲಿ ವಾಸ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ನಂಜಮ್ಮ ಅವರಿಗೆ ವಿವಾಹವಾಗಿ ಸುಮಾರು 50 ವರ್ಷಗಳಾಗಿರಬಹುದು ಎಂದರೆ ಇರಬಹುದು. ಹಬ್ಬಹರಿದಿನಗಳಲ್ಲಿ ನಂಜಮ್ಮ ಅವರು ನನ್ನ ತಂದೆಯ ಮನೆಗೆ ಮತ್ತು ನನ್ನ ದೊಡ್ಡಪ್ಪಂದಿರ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಯಾರೂ ಸಹ ನಂಜಮ್ಮ ಅವರನ್ನು ಮನೆಗೆ ಕರೆಯುವುದಿಲ್ಲ. ನನ್ನ ತಂದೆ ಹಾಗೂ ನನ್ನ ದೊಡ್ಡಪ್ಪಂದಿರು ನಂಜಮ್ಮ ಅವರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಗೌರಿ ಹಬ್ಬದ ಸಮಯದಲ್ಲಿ ಬಾಗೀನ ಕೊಡುತ್ತಿದ್ದರು ಎಂದರೆ ಸರಿಯಲ್ಲ. ದಾವಾಸ್ತಿಯು ನನ್ನ ತಾತನಿಗೆ ಸೇರಿದ ಜಮೀನಾಗಿದ್ದು ನಮಗೆ ಉಳುಮೆ ಮಾಡಲು ಬಿಡುತ್ತಿಲ್ಲವೆಂದು ದಾವೆ ಸಲ್ಲಿಸಿರುತ್ತೇವೆ.

ನನ್ನ ತಂದೆ ಮತ್ತು ನನ್ನ ದೊಡ್ಡಪ್ಪಂದಿರು ಮತ್ತು ಅವರ ತಾಯಿ ದಿನಾಂಕ 05.03.1994 ರಂದು ಪಂಚಾಯ್ತಿ ಪಾಲು ಪಟ್ಟಿಯ ಪ್ರಕಾರ ದಾವಾಸ್ತಿಯನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಪಂಚಾಯ್ತಿ ಪಾಲು ಪಟ್ಟಿಯ ಪ್ರಕಾರ ಅವರ ಪಾಲಿಗೆ ಬಂದ ಹಿಸ್ಸೆಗೆ ಪ್ರತ್ಯೇಕ ಖಾತೆ ಮಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಂಚಾಯ್ತಿ ಪಾಲು ಪಟ್ಟಿಯ ಪ್ರಕಾರ ನನ್ನ ತಂದೆಯ ಪಾಲಿಗೆ ಬಂದ ಆಸ್ತಿಯನ್ನು ನನ್ನ ತಂದೆ ಜೀವಂತವಿರುವವರೆಗೆ ನನ್ನ ತಂದೆ ಮತ್ತು ನಾವು ಒಟ್ಟಾಗಿ ಹಾಗೂ ನನ್ನ ತಂದೆ ಮೃತ ಪಟ್ಟ ನಂತರ ನನ್ನ ತಾಯಿ ಮತ್ತು ನಾವು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದೇವೆಂದರೆ ಸರಿಯಲ್ಲ.

1 ನೇ ವಾದಿಯ ವಿವಾಹವು 2019 ರಲ್ಲಿ ನಡೆದಿರುತ್ತದೆ. ನನ್ನ ವಿವಾಹವು 2021 ರಲ್ಲಿ ನಡೆದಿರುತ್ತದೆ. 2 ನೇ ಪ್ರತಿವಾದಿಯು ನಮ್ಮ ಜೊತೆ ಅನ್ಯೋನ್ಯವಾಗಿದ್ದಾರೆ ಎಂದರೆ ಸರಿಯಲ್ಲ. ನಾವು ಮೊದಲಿನಿಂದಲೂ ಸಹ 2 ನೇ ಪ್ರತಿವಾದಿಯ ಜೊತೆ ಅನ್ಯೋನ್ಯವಾಗಿಲ್ಲ. ನನ್ನ ಮದುವೆಗಿಂತ ಮೊದಲು ನನ್ನ ತಾಯಿಯ ಮನೆಯಾದ ಬೆಂಗಳೂರಿನಲ್ಲಿ ವಾಸವಿದ್ದೆನು. ದಾವಾವನ್ನು ಸಲ್ಲಿಸುವ ಸಮಯದಲ್ಲಿ ಸಹ ಬೆಂಗಳೂರಿನಲ್ಲಿ ವಾಸವಿದ್ದೆನು. ದಾವೆಯಲ್ಲಿ ನಾವು ಜಿನ್ನೇನಹಳ್ಳಿಯಲ್ಲಿ ವಾಸವಿರುತ್ತೇವೆ ಎಂದು ನಮೂದಿಸಿರುತ್ತೇವೆ. ದಾವೆಯಲ್ಲಿ ಬೆಂಗಳೂರು ವಿಳಾಸವನ್ನು ನಮೂದಿಸಲು ತೊಂದರೆಯಿರಲಿಲ್ಲ. ನನ್ನ ರೇಷನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ನಲ್ಲಿ ಜಿನ್ನೇನಹಳ್ಳಿ ವಿಳಾಸ ಇರುತ್ತದೆ. ನಾವು ನನ್ನ ಅಜ್ಜಿಯ ಊರಾದ ಪಡುವನಹಳ್ಳಿಗೆ

ಮೊದಲಿನಿಂದಲೂ ಹೋಗುತ್ತಿಲ್ಲ. ನನ್ನ ಅಜ್ಜಿ 2 ನೇ ಪ್ರತಿವಾದಿ ಮತ್ತು ನಾವು ಅನ್ಯೋನ್ಯವಾಗಿದ್ದು 2 ನೇ ಪ್ರತಿವಾದಿಯ ಚಿತಾವಣೆ ಮೇರೆಗೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಹಿಸ್ಸೆಯ ಬಾಬ್ತು ಸ್ವತ್ತಾದ ಜಿನ್ನೇನಹಳ್ಳಿಯಲ್ಲಿ ವಾಸವಾಗಿದ್ದು ಸದರಿ ವಿಳಾಸದಲ್ಲಿ ಆಧಾರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ನ್ನು ಹೊಂದಿದ್ದು ಸದರಿ ಹಿಸ್ಸಾ ಬಾಬ್ತು ಸ್ವತ್ತನ್ನು ಅನುಭವಿಸಿಕೊಂಡು ಪ್ರತ್ಯೇಕವಾಗಿ ವಾಸವಿದ್ದೇವೆಂದರೆ ಸರಿಯಲ್ಲ. ಹಿಸ್ಸಾ ಬಾಬ್ತು ಸ್ವತ್ತನ್ನು ಅನುಭವಿಸಿಕೊಂಡು ಪ್ರತ್ಯೇಕವಾಗಿ ವಾಸ ಮಾಡಿಕೊಂಡು ಇದ್ದರೂ ಸಹ ಪ್ರತ್ಯೇಕವಾಗಿ ವಾಸ ಮಾಡುತ್ತಿಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಮ್ಮ ಮದುವೆಯ ಖರ್ಚು ವೆಚ್ಚವನ್ನು ನನ್ನ ತಾಯಿಯೇ ಭರಿಸಿರುತ್ತಾರೆ. ನನ್ನ ತಂದೆಯ ಪಾಲಿಗೆ ಬಂದ ಆಸ್ತಿಯ ವರಮಾನದಿಂದ ನಮ್ಮ ಮದುವೆಯ ಖರ್ಚನ್ನು ಭರಿಸಿರುತ್ತಾರೆ ಎಂದರೆ ಸರಿಯಲ್ಲ. 1994 ರಲ್ಲಿ ಪಂಚಾಯ್ತಿ ಪಾಲು ಪಟ್ಟಿ ಆಗಿದ್ದರೂ ಸಹ ನನ್ನ ದೊಡ್ಡಪ್ಪಂದಿರು ಅವರ ಪಾಲಿಗೆ ಬಂದ ಹಿಸ್ಸೆ ಆಸ್ತಿಯನ್ನು ಅಭಿವೃದ್ದಿ ಪಡಿಸಿರುವುದರಿಂದ ಹಾಗೂ ಅಭಿವೃದ್ದಿಪಡಿಸಿರುವುದನ್ನು ಸಹಿಸಲಾಗದೇ ಸದರಿ ಆಸ್ತಿಯಲ್ಲಿ ಹಿಸ್ಸಾ ಪಡೆಯಬೇಕು ಎಂಬ ದುರುದ್ದೇಶದಿಂದ ಹಿಸ್ಸೆ ಆಗಿರುವ ಸಂಗತಿಯನ್ನು ಮರೆಮಾಚಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿ ಪಿ 2 ನ್ನು ತೋರಿಸಲಾಗಿ ದಾವಾಸ್ತಿಯ ಐಟಂ ನಂಬರ್ 1 ಪ್ರತಿವಾದಿ ಸಂಖ್ಯೆ 3 ರವರ ಹೆಸರಿನಲ್ಲಿದೆ ಎಂದರೆ ಸರಿ. 3 ನೇ ಪ್ರತಿವಾದಿಗೆ ದಾಖಲಾತಿಗಳನ್ನು ಪರಿಶೀಲಿಸಿ ಬ್ಯಾಂಕ್ ನಿಂದ ನಿ ಪಿ 2 ರ ಆಧಾರದ ಮೇಲೆ ಸಾಲ ನೀಡಿರುತ್ತಾರೆ ಎಂದರೆ ಸರಿಯಲ್ಲ.

ನಿ ಪಿ 3 ರಲ್ಲಿ ದಾವಾಸ್ತಿಯ ಐಟಂ ನಂಬರ್ 3 ನೇ ಸ್ವತ್ತು 1 ಮತ್ತು 4 ನೇ ಪ್ರತಿವಾದಿಯ ಹೆಸರಿನಲ್ಲಿ ಜಂಟಿ ಖಾತೆಯಿದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

4 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾಸ್ತಿಯ ಖಾತೆಗಳು ಇರುವುದರಿಂದ ಅವರನ್ನು ದಾವೆಯ ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ದಾವಾಸ್ತಿಯ ಪೈಕಿ ಯಾವ ಐಟಂ ನ ಆಸ್ತಿಯನ್ನು ಯಾವ ದಾಖಲಾತಿಗಳ ಆಧಾರದ ಮೇಲೆ 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿಕೊಂಡಿದ್ದಾರೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. 1 ನೇ ಪ್ರತಿವಾದಿಯ ಹಿಸ್ಸಾ ಬಾಬ್ತು ಸ್ವತ್ತನ್ನು ತನ್ನ ಹೆಂಡತಿ 4 ನೇ ಪ್ರತಿವಾದಿಯ ಹೆಸರಿಗೆ ಖಾತಾ ಬದಲಾವಣೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯವು ನನ್ನ ತಾಯಿ 3 ನೇ ವಾದಿಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

1994 ರಲ್ಲಿ ಪಂಚಾಯ್ತಿ ಪಾಲು ಪಟ್ಟಿಯ ಪ್ರಕಾರ ನನ್ನ ತಂದೆ ಮತ್ತು ದೊಡ್ಡಪ್ಪಂದಿರ ಪಾಲಿಗೆ ಬಂದ ಹಿಸ್ಸಾ ಬಾಬ್ತು ಸ್ವತ್ತನ್ನು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ

ವಿಚಾರಗಳು ಗೊತ್ತಿದ್ದರೂ ಸಹ 1, 3 ಮತ್ತು 4 ನೇ ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎನ್ನುವ ದುರುದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಸ.ಇ.ಎ.ಒ.,

ಸಹಿ/-

**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ಚನ್ನರಾಯಪಟ್ಟಣ.**